

ಶಹನ್ ಪೊನ್ನಪ್ಪ





ಕಾವ್ಯಾ ಶಾಸ್ತ್ರಿ

**‘ರವಿವರ್ಮನ ಕುಂಚದ ಕಲೆ ಭಲೆ ಸಾಕಾರವೊ**
**ಕವಿ ಕಲ್ಪನೆ ಕಾಣುವ ಚೆಲುವಿನ ಜಾಲವೋ’**

‘ಸೊಸೆ ತಂದ ಸೌಭಾಗ್ಯ’ ಸಿನಿಮಾದ ಈ ಹಾಡಿನಲ್ಲಿ ನಾಯಕ ರವಿವರ್ಮನ ಕುಂಚದಲ್ಲಿ ಸೃಷ್ಟಿಗೊಂಡ ಚೆಲುವೆಯರ ಸಾಲಿನಲ್ಲಿ ತನ್ನ ಪ್ರೇಯಸಿಯನ್ನೂ ಕೂಡಿಸುವ ಪ್ರಯತ್ನವನ್ನು ಮಾಡುತ್ತಾನೆ. ನೂರಾರು ವರ್ಷಗಳ ಹಿಂದೆಯೇ ಆಗಿಹೋದ ಅಪ್ರತಿಮ ಕಲಾವಿದ ರವಿಮರ್ಮ ಸೃಷ್ಟಿಸಿದ ಕಲಾಜಗತ್ತೇ ಅಂಥದ್ದು. ಅದನ್ನು ಕಂಡು, ಮರುಳುಗೊಂಡು ತಮ್ಮ ಪ್ರೇಯಸಿಯರನ್ನು ಅವನ ಚಿತ್ರದ ಫ್ರೇಮಿನೊಳಗೆ ಕಲ್ಪಿಸಿಕೊಂಡು ಸುಖಿಸುವ ರಸಿಕರೂ ಈಗಲೂ ಕಮ್ಮಿಯಿಲ್ಲ.

ರವಿಮರ್ಮನ ಕುಂಚ ಚೆಲುವೆಯರನ್ನು ಮರುಸೃಷ್ಟಿಸುವ ಪ್ರಯತ್ನಗಳು ಮತ್ತೆ ಮತ್ತೆ ನಡೆಯುತ್ತಲೇ ಇವೆ. ಇದುವರೆಗೆ ಕಲಾಜಗತ್ತಿನಲ್ಲಿಯೇ ಅಂಥ ಪ್ರಯತ್ನಗಳು ಹೆಚ್ಚಾಗಿ ನಡೆಯುತ್ತಿದ್ದವು. ಆದರೆ ಈ ವರ್ಷಾರಂಭದಲ್ಲಿ ತೆಲುಗಿನಲ್ಲಿ ಒಂದು ಅಪೂರ್ವ ಪ್ರಯತ್ನ ನಡೆಯಿತು. ಜಿ. ವೆಂಕಟ್ ರಾಮ್ ಎನ್ನುವ ಛಾಯಾಗ್ರಾಹಕರು ದಕ್ಷಿಣ ಭಾರತದ ಜನಪ್ರಿಯ ನಟಿಯರನ್ನು ಬಳಸಿಕೊಂಡು ರವಿವರ್ಮನ ಕೆಲವು ಪೇಂಟಿಂಗ್ಸ್‌ಗಳನ್ನು ಮರುಸೃಷ್ಟಿಸಿದ್ದರು. ಇದು ಸಾಕಷ್ಟು ಸುದ್ದಿಯಾಗಿತ್ತು.

ಇದೀಗ ಕನ್ನಡದಲ್ಲಿಯೂ ಇಂಥದ್ದೇ ಒಂದು ಪ್ರಯತ್ನ ನಡೆದಿದೆ. ಈ ಸಾಹಸಕ್ಕೆ ಮುಂದಾಗಿರುವುದು ಮೈಸೂರಿನ ಶಹನ್ ಪೊನ್ನಪ್ಪ ಅವರ ತಂಡ. ಶಹನ್ ಪೊನ್ನಪ್ಪ ಕನ್ನಡ ಚಿತ್ರರಂಗಕ್ಕೆ ಹೊಸಬರೇನೂ ಅಲ್ಲ. ‘ಪ್ಯಾಟೇ ಹುಡ್ಗೀರ್ ಹಳ್ಳೀಗ್ ಬಂದ್ರು’ ರಿಯಾಲಿಟಿ ಶೋನಲ್ಲಿ ರನ್ನರ್ ಅಪ್ ಆಗಿದ್ದ ಶಹನ್, ನಂತರ ಮೂರು ಸಿನಿಮಾಗಳಲ್ಲಿ ನಟಿಸಿದ್ದಾರೆ.